# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>**Part – III** | ಬೆಂಗಳೂರು, ಗುರುವಾರ ೨೦, ನವೆಂಬರ್, ೨೦೨೫ (ಕಾರ್ತಿಕಾ , ೨೯, ಶಕವರ್ಷ, ೧೯೪೭)<br>**BENGALURU, THURSDAY 20, NOVEMBER, 2025 ( KARTHIKA , 29, SHAKAVARSHA, 1947)** | ನಂ. ೭೪೦<br>**No. 740** |
|---|---|---|

**ಕರ್ನಾಟಕ ಸರ್ಕಾರ**

**ಸಂಖ್ಯೆ: ನಅಇ 135 ಎಂಎಲ್‌ಆರ್ 2022(e)**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, **ದಿನಾಂಕ:20/11/2025.**

**ಅಧಿಸೂಚನೆ**

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 4, 9, 349 ಮತ್ತು 355 ನೇ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಕೊಪ್ಪಳ ಜಿಲ್ಲೆಯ ಹನುಮಸಾಗರ ಗ್ರಾಮ ಪಂಚಾಯಿತಿಯನ್ನು ಅನುಬಂಧ–ಎ ರಲ್ಲಿ ನಮೂದಿಸಿರುವಂತೆ 'ಪರಿವರ್ತಿತ ಪ್ರದೇಶ'ವೆಂದು ಘೋಷಿಸಲು ಹಾಗೂ ಸದರಿ 'ಪರಿವರ್ತಿತ ಪ್ರದೇಶ' ವನ್ನು 'ಹನುಮಸಾಗರ ಪಟ್ಟಣ ಪಂಚಾಯಿತಿ' ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 135 ಎಂಎಲ್‌ಆರ್ 2022; ದಿನಾಂಕ:25/07/2025 ನ್ನು ದಿನಾಂಕ:25/07/2025 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ–3 ರ ಸಂಖ್ಯೆ:415 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆ ಸ್ವೀಕೃತವಾಗದಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 4, 9, 349 ಮತ್ತು 355 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ–ಎ' ಮತ್ತು 'ಅನುಸೂಚಿ–ಬಿ' ರಲ್ಲಿ ನಮೂದಿಸಿರುವಂತೆ ಕೊಪ್ಪಳ ಜಿಲ್ಲೆಯ ಹನುಮಸಾಗರ ಗ್ರಾಮ ಪಂಚಾಯಿತಿಯನ್ನು 'ಪರಿವರ್ತಿತ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತಿತ ಪ್ರದೇಶವನ್ನು 'ಹನುಮಸಾಗರ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ:

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;

3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

**ಸಂಖ್ಯೆ:ನಅಇ 135 ಎಂಎಲ್ಆರ್ 2022(e).**

**ಶೆಡ್ಯೂಲ್–ಎ**

| ಜಿಲ್ಲೆ | ಪರಿಗಣಿಸಲಾಗಿರುವ ಸ್ಥಳೀಯ ಸಂಸ್ಥೆ ಹೆಸರು | ಸೇರ್ಪಡೆಗೊಳಿಸಿರುವ ಪ್ರದೇಶಗಳ ವಿವರ | ಒಟ್ಟು ಪ್ರದೇಶ |
|---|---|---|---|
| ಕೊಪ್ಪಳ | ಹನುಮಸಾಗರ ಗ್ರಾಮ ಪಂಚಾಯಿತಿ | ಹಾಲಿ ಹನುಮಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳು | 19.2 ಚದರ ಕಿಲೋ ಮೀಟರ್ಗಳು |

**ಷೆಡ್ಯೂಲ್–ಬಿ**

**ಪೂರ್ವ:** ಪೂರ್ವ ಭಾಗಕ್ಕೆ ಮುದುಟಗಿ ಮತ್ತು ಹೊಸಳ್ಳಿ ಗ್ರಾಮದ ಉಳಿದ ಭಾಗ (ಮುದುಟಗಿ ಗ್ರಾಮದ ಸರ್ವೇ ನಂ.8 ರಿಂದ 37 ರವರೆಗೆ ಹಾಗೂ ಮನ್ನೇರಾಳ ಗ್ರಾಮದ ಸರ್ವೇ ನಂ.26 ರಿಂದ 32/2 ರವರೆಗೆ).
**ಪಶ್ಚಿಮ:** ಪಶ್ಚಿಮ ಭಾಗಕ್ಕೆ ಮನ್ನೇರಾಳ ಗ್ರಾಮ ಹಾಗೂ ಮಾವಿನ ಇಟಗಿ ಗ್ರಾಮದ ಉಳಿದ ಭಾಗ ಮತ್ತು ಮದ್ನಾಳ ಗ್ರಾಮದ ಗಡಿ ಭಾಗ (ಹೊಸಳ್ಳಿ ಗ್ರಾಮದ ಸರ್ವೇ ನಂ.10 ರಿಂದ 14 ರವರೆಗೆ).
**ಉತ್ತರ:** ಉತ್ತರ ಭಾಗಕ್ಕೆ ಮನ್ನೇರಾಳ ಮತ್ತು ಮುದುಟಗಿ ಗ್ರಾಮದ ಉಳಿದ ಭಾಗ ಹಾಗೂ ಸೇಬಿನಕಟ್ಟಿ ಗ್ರಾಮದ ಗಡಿ ಭಾಗ (ಮುದುಟಗಿ ಗ್ರಾಮದ ಸರ್ವೇ ನಂ.38 ರಿಂದ 85/2 ರವರೆಗೆ ಹಾಗೂ ಹೊಸಳ್ಳಿ ಗ್ರಾಮದ ಸರ್ವೇ ನಂ.15 ರಿಂದ 22 ರವರೆಗೆ).
**ದಕ್ಷಿಣ:** ದಕ್ಷಿಣ ಭಾಗಕ್ಕೆ ಹೊಸಳ್ಳಿ ಗ್ರಾಮದ ಉಳಿದ ಭಾಗ ಹಾಗೂ ಮದ್ನಾಳ ಮಡಿಕ್ಕೇರಿ ಹಾಗೂ ಜುಂಜಲಕೊಪ್ಪ ಗ್ರಾಮದ ಗಡಿ ಭಾಗ (ಮನ್ನೇರಾಳ ಗ್ರಾಮದ ಸರ್ವೇ ನಂ.26 ರಿಂದ 32/2 ರವರೆಗೆ ಹಾಗೂ ಮಾವಿನ ಇಟಗಿ ಗ್ರಾಮದ ಸರ್ವೇ ನಂ.5 ರಿಂದ 78 ರವರೆಗೆ).

## GOVERNMENT OF KARNATAKA

**No.UDD 135 MLR 2022(e)**

Karanataka Government Secretariat,
Vikasa Soudha,
Bangalore, **dated:20/11/2025.**

## NOTIFICATION

Whereas the Notification to declare the Grama Panchayat Area of Hanumasagara of Koppal District as a Transitional Area and further to specify such Areas as the Town Panchayat of Hanumasagara as mentioned in Schedule-A along with boundaries mentioned in Schedule-B was published as required by section-3 read with section-4, 9, 349 and 355 of the Karnataka Municipalities Act, 1964, vide Government Notification No:UDD 135 MLR 2022; dated 25/07/2025 by providing thirty days time and was published in part-III, No.415, Karnataka Gazette Extraordinary, dated 25/07/2025 inviting objections from all persons likely to be affected thereby on or before thirty days from the date of publication of the above Notification.

And whereas the Notification was made available to the public on the day of publication;

And whereas no objection/suggestion has been received within the stipulated period;

Now, therefore, in exercise of the powers conferred by Section-3, 4, 9, 349 and 355 of the Karnataka Municipalities Act, 1964, the Hon'ble Governor, hereby declare the Grama Panchayat Area of Hanumasagara, Koppal District as mentioned in Schedule–A, along with boundaries mentioned in Schedule–B, as the "Transitional Area" and further specify such area to be the "Town Panchayat Area of Hanumasagara" having regard to:

1. The population of such area is not less than ten thousand and not more than twenty thousand;
2. The density of population in such area is not less than four hundred inhabitants to one square kilometer of area;
3. The percentage of employment in non-agricultural activities is not less than fifty per cent of the total employment.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**No.UDD 135 MLR 2022(e)**

## Schedule-A

| District | Grama Panchayat considered | Areas included | Total Area |
|---|---|---|---|
| Koppal | Grama Panchayat of Hanumasagara | Present Areas of Grama Panchayat of Hanumasagara | 19.2 Square Kilo Meters |

## Schedule-B

**East:** Mannerala, Mudutagi villages remaining part and village boundary of Sebinakatti (Mudutagi Survey No.8 to 37 and Mannerala Survey No.26 to 32/2).

**West:** Hosalli village remaining part and village boundaries of Madnal, Madikkeri and Junjalakoppa (Hosalli Survey No.10 to 14).

**North:** Mudutagi and Hosalli villages remaining part (Mudutagi Survey No.38 to 85/2 and Hosalli Survey No.15 to 22).

**South:** Mannerala, Mavina Itagi villages remaining part and village boundary of Madnal (Mannerala Survey No.26 to 32/2 and Mavina Itagi Survey No.5 to 78).

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH